ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳ ಪಟ್ಟಿ

ಮಂಗನ ಕಾಯಿಲೆಗೆ ಲಸಿಕೆ ತಯಾರಿಸುವ ಬಗ್ಗೆ

(೪೨೨) ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ).—ಮಾನ್ಯ ಆರೋಗ್ಯ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧. ೧೯೮೫ರ ಅಂತ್ಯದೊಳಗೆ ಮಂಗನ ಖಾಯಿಲೆಗೆ ಲಸಿಕೆ ತಯಾರಾಗುವುದಾಗಿ ಸರ್ಕಾರದವರು ಘೋಷಿಸಿದರೂ ಕೂಡ ಲಸಿಕೆ ತಯಾರಿಕೆಯಲ್ಲಿ ವಿಳಂಬಕ್ಕೆ ಕಾರಣವೇನು ?

೨. ಇದು ಯಾವಾಗ ತಯಾರು ಆಗುವುದಾಗಿ ಸ್ಪಷ್ಟವಾಗಿ ತಿಳಿಸಲಾಗುವುದೇ ?

೩. ಬೆಳ್ತಂಗಡಿ ತಾಲ್ಲೂಕಿನಲ್ಲಿ ಮಂಗನ ಕಾಯಿಲೆಯಿಂದ ಮೃತಪಟ್ಟ ೬ ಕುಟುಂಬದವರಿಗೆ ಪರಿಹಾರ ಇನ್ನೂ ಸಿಗದಿರಲು ಕಾರಣವೇನು ?

೪. ಸದರಿ ೬ ಕುಟುಂಬದವರಿಗೆ ಯಾವಾಗ ಪರಿಹಾರವನ್ನು ನೀಡಲಾಗುವುದು ?

೫. ಮಂಗನ ಕಾಯಿಲೆ ರೋಗ ತಗುಲಿ ಗಂಭೀರವಾಗಿ ಕೆಲಸ ಮಾಡಲು ಅಶಕ್ತರಿಗೆ ರೂ. ೫೦೦-೦೦ ರಂತೆ ಪರಿಹಾರ ನೀಡುವುದಾಗಿ ಸರ್ಕಾರ ಘೋಷಿಸಿದರೂ ಕೂಡ ಅದನ್ನು ಇನ್ನೂ ಕೊಡದಿರಲು ಕಾರಣವೇನು ಹಾಗೂ ಅದನ್ನು ಯಾವಾಗ ಕೊಡಲಾಗುವುದು?

ಶ್ರೀ ಎಚ್. ಎಲ್. ತಿಮ್ಮೇಗೌಡ.—(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

೧. ಎರಡು ಯಂತ್ರಗಳು ಭಾರತದಲ್ಲಿ ದೊರೆಯದ ಕಾರಣ ಇವುಗಳನ್ನು ಹೊರದೇಶದಿಂದ ಆಮದು ಮಾಡಿಕೊಳ್ಳಬೇಕಾಗಿದೆ.

೨. ಪ್ರಾಯೋಗಿಕ ಲಸಿಕೆಯು ತಯಾರಾದ ಸಮಯದಿಂದ ಸಾಮಾನ್ಯವಾಗಿ ೨½ ವರ್ಷಗಳಿಂದ ೩ ವರ್ಷಗಳು ಬೇಕಾಗುತ್ತದೆ. ಸುಮಾರು ೧೯೮೭-೮೮ರಲ್ಲಿ ಪ್ರಯೋಗಕ್ಕೆ ಸಿಗುವ ಸಾಧ್ಯತೆ ಇದೆ.

೩. ಪೂರ್ಣ ಮಾಹಿತಿಯು ದೊರಕದೇ ಇದ್ದುದರಿಂದ ವಿಳಂಬವಾಗಿದೆ. ಈಗ ಈ ಪ್ರಕರಣಗಳು ಪರಿಶೀಲನೆಯಲ್ಲಿವೆ.

೪. ಸಾಧ್ಯವಾದಷ್ಟು ಬೇಗ.

೫. ಕೂಲಂಕಷವಾಗಿ ಈ ಸಲಹೆಯನ್ನು ಪರಿಶೀಲಿಸಿದ ನಂತರ ಇದು ವ್ಯವಹಾರಿಕವೆಂದು ಕಂಡು ಬರುವುದಿಲ್ಲ.

೬. ನಮ್ಮ ರಾಜ್ಯದಲ್ಲಿ ಮಂಗನ ಕಾಯಿಲೆಯಲ್ಲದೆ ಇತರ ರೋಗಗಳಿಗೂ ಜನರು ತುತ್ತಾಗುತ್ತಾರೆ. ಕೆಲವೊಂದು ಪೂರಕವಾಗಿ ಪರಿಣಮಿಸಿದರೆ, ಕೆಲವು ರೋಗಗಳು ರೋಗಿಗಳನ್ನು ಅಂಗವಿಕಲರನ್ನಾಗಿ ಇಲ್ಲವೆ ದುರ್ಬಲರನ್ನಾಗಿ ಮಾಡುತ್ತವೆ. ಇಂತಹ ಎಲ್ಲಾ ರೀತಿಯ ಜನರಿಗೂ ಪರಿಹಾರ ಕೊಡುವುದು ಸಾಧ್ಯವಾಗದು. ಆದರೂ ಇವರಿಗೆ ಸಾಧ್ಯವಾದಷ್ಟು ವೈದ್ಯಕೀಯ ನೆರವು ನೀಡಲಾಗುವುದು.

ಕುಂದಾಪುರ ಆರಕ್ಷಕ ಠಾಣೆಯವರು ವರದಕ್ಷಿಣೆ ಮಂತ್ರಿ ಪುನರ್ ವಿವಾಹ ವಿಚಾರದಲ್ಲಿ ಸ್ವೀಕರಿಸಿರುವ ದೂರುಗಳು

೭೮೫. ಶ್ರೀ ಕೆ. ಪ್ರತಾಪ ಚಂದ್ರಶೆಟ್ಟಿ (ಕುಂದಾಪುರ).— ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ೧೯೮೩ನೇ ಜನವರಿಯಿಂದ ಕುಂದಾಪುರ ಆರಕ್ಷಕ ಠಾಣೆಯಲ್ಲಿ ವರದಕ್ಷಿಣೆ ಪ್ರಕರಣ ಹಾಗೂ ಮರು ಮದುವೆ ಬಗ್ಗೆ ಮಹಿಳೆಯರಿಂದ ಬಂದ ದೂರುಗಳೆಷ್ಟು ?

(ವರ್ಷವಾರು ವಿವರ ನೀಡುವುದು)

(ಆ) ಬಂಲ್ಕುಂಡ ದೂರುಗಳ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮವೇನು ?